# ಬಾಪ್ತಿಸ್ಮದಲ್ಲಿ ನಾವು ಏನು ಮಾಡುತ್ತೇವೆ?

ಬಾಪ್ತಿಸ್ಮವು ನಾವು ಬಾಪ್ತಿಸ್ಮ ಹೊಂದುವಾಗ ಅರ್ಥಮಾಡಿಕೊಳ್ಳಬೇಕಾದ ನಾಲ್ಕು ತತ್ವಗಳನ್ನು ಒಳಗೊಂಡಿರುತ್ತದೆ. ಈ ತತ್ವಗಳು ನಾವು ಕ್ರೈಸ್ತರಾಗುವಾಗ ಏನು ಸಂಭವಿಸುತ್ತದೆ ಎಂಬುದನ್ನು ಉದಾಹರಿಸುತ್ತವೆ.

## ನಾವು ಕೊಡುತ್ತೇವೆ

ನಾವು ಬಾಪ್ತಿಸ್ಮ ಹೊಂದುವಾಗ, ದೇವರು ನಮ್ಮ ಜೀವಿತಗಳಲ್ಲಿ ಆತನು ಸರಿಪಡಿಸುವ ತನ್ನ ಕಾರ್ಯವನ್ನು ಮಾಡಲಿಕ್ಕಾಗುವಂತೆ, ನಂಬಿಕೆಯಿಂದ ನಮ್ಮನ್ನು ದೇವರ ಹಸ್ತಗಳಲ್ಲಿ ಕೊಡಬೇಕು (ಕೊಲೊಸ್ಸೆ 2:12). ಈ ಹಂತದಲ್ಲಿ, ದೇವರ ವಾಕ್ಯವನ್ನು ಗಮನವಿಟ್ಟು ನಾವು ಯೇಚಿಸಿರತಕ್ಕದ್ದು (ಯೋಹಾನ 6:45; ಅಪೊಸ್ತಲರ ಕೃತ್ಯಗಳು 18:8). ಯೇಸುವಿಗೆ ನಮ್ಮನ್ನು ಕೊಡಲು ತೀರ್ಮಾನಿಸುವದರಿಂದ, ನೀತಿಯ ಸೇವಕರಾಗಿರಲು ಲೋಕಕ್ಕೆ ಸೇವೆ ಮಾಡುವದನ್ನು ಬಿಟ್ಟು ಬಿಡುತ್ತೇವೆ (ರೋಮಾಪುರ 6:17, 18). ಯೇಸುವು ಕರ್ತನಾಗಿದ್ದಾನೆ, ಕ್ರಿಸ್ತನಾಗಿದ್ದಾನೆ, ದೇವರ ಕುಮಾರನಾಗಿದ್ದಾನೆ ಎಂದು ನಮ್ಮ ಹೃದಯಗಳಲ್ಲಿ ನಂಬುತ್ತೇವೆ ಎಂದು ಬಾಯ್ದೆರೆಯಾಗಿ ಸಾಕ್ಷಿಯನ್ನೂ ಕೊಡತಕ್ಕದ್ದು (ರೋಮಾಪುರ 10:9, 10). ಯೇಸುವಿಗಾಗಿ ನಾವು ನೂತನ ಜೀವದಲ್ಲಿ ಪ್ರವೇಶಿಸುವಂತೆ ನಮ್ಮ ಹಿಂದಿನದಕ್ಕಾಗಿ ಸಾಯುವಂತೆ ಬಾಪ್ತಿಸ್ಮದಲ್ಲಿ ನಮ್ಮನ್ನು ಆತನಿಗೆ ಕೊಡಬೇಕು (ರೋಮಾಪುರ 6:4).

## ನಾವು ಸ್ವೀಕರಿಸುತ್ತೇವೆ

ಈ ರೀತಿಯಲ್ಲಿ ನಮ್ಮನ್ನು ನಾವು ಕೊಟ್ಟರೆ, ಯೇಸುವಿನ ರಕ್ತದಿಂದ ಒದಗಿಸಲ್ಪಟ್ಟ ದೇವರ ಕ್ಷಮಮಾಪಣೆಯನ್ನು ನಾವು ಸ್ವೀಕರಿಸುತ್ತೇವೆ (ಅಪೊಸ್ತಲರ ಕೃತ್ಯಗಳು 2:38; ಕೊಲೊಸ್ಸೆ 2:12, 13; ಇಬ್ರಿಯ 9:22). ಆತನ ರಕ್ತವು ನಮ್ಮ ಪಾಪಗಳನ್ನು ತೊಳೆಯುವುದು (ಅಪೊಸ್ತಲರ ಕೃತ್ಯಗಳು 22:16; ಪ್ರಕಟನೆ 1:5) ಮತ್ತು ರಕ್ಷಣೆಯನ್ನು ಒದಗಿಸುವುದು (ಮಾರ್ಕ 16:15, 16; 1 ಪೇತ್ರ 3:21). ಹಿಂದಿನ ಪಾಪಗಳ ತೊಳೆಯುವಿಕೆ ಶುದ್ಧ ಮನಸ್ಸಾಕ್ಷಿಯಲ್ಲಿ ಪರಿಣಾಮಗೊಳ್ಳುವದರಿಂದ, ನಾವು ಒಂದು ಹೊಸ ಪ್ರಾರಂಭವನ್ನು ಸ್ವೀಕರಿಸುತ್ತೇವೆ (1 ಪೇತ್ರ 3:21). ನಾವು ಬಾಪ್ತಿಸ್ಮ ಹೊಂದುವಾಗ, ನಾವು ಒಂದು ಹೊಸ ಜೀವಿತವನ್ನು ಪ್ರಾರಂಭಿಸುತ್ತೇವೆ (ರೋಮಾಪುರ 6:4).

## ನಾವು ಆಗುತ್ತೇವೆ

ನಮ್ಮ ಪಾಪಗಳು ತೆಗೆದು ಹಾಕಲ್ಪಟ್ಟನಂತರ, ಕ್ರಿಸ್ತನಲ್ಲಿ ನಾವು ನೂತನ ಸೃಷ್ಟಿಗಳಾಗುತ್ತೇವೆ (2 ಕೊರಿಂಥ 5:17). ಹೊಸದಾಗಿ ಹುಟ್ಟುವದರಿಂದ (ಯೋಹಾನ 3:3-5), ನಾವು ದೇವರ ಮಕ್ಕಳಾಗುತ್ತೇವೆ (ಗಲಾತ್ಯ 3:26). ಕ್ರಿಸ್ತನೊಂದಿಗೆ ನಾವು ಒಂದಾಗುವಾಗ (ರೋಮಾಪುರ 6:5), ನಾವು ಆತನಲ್ಲಿ ಪಾಲುಗಾರರಾಗುತ್ತೇವೆ (ಇಬ್ರಿಯ 3:14) ಮತ್ತು ಆತನ ಸ್ವಭಾವದಲ್ಲಿ ಪಾಲುಗಾರರಾಗುತ್ತೇವೆ (2 ಪೇತ್ರ 1:4; ನೋಡಿರಿ 2 ಕೊರಿಂಥ

5:21). ನಾವು ಕ್ರಿಸ್ತನನ್ನು "ಧರಿಸಿಕೊಳ್ಳುತ್ತೇವೆ" (ಗಲಾತ್ಯ 3:27) ಮತ್ತು ಆತನಂತೆ ಬೆಳೆಯುತ್ತೇವೆ, ಆತನ ಸ್ವರೂಪದಲ್ಲಿ ಮಾರ್ಪಡುತ್ತೇವೆ (2 ಕೊರಿಂಥ 3:18).

## ನಾವು ಪ್ರವೇಶಿಸುತ್ತೇವೆ

ದೇವರ ಮಕ್ಕಳಾಗುವದರಿಂದ, ದೇವರ ಕುಟುಂಬದಲ್ಲಿ, ಆತನ ಮನೆತನದಲ್ಲಿ, ಸಭೆಯಾಗಿರುವಂಥದ್ದರಲ್ಲಿ ನಾವು ಪ್ರವೇಶಿಸುತ್ತೇವೆ (1 ತಿಮೊಥೆ 3:15). ಸಭೆ ಮತ್ತು ದೇಹ ಒಂದೇಯಾಗಿರುತ್ತವೆ (ಎಫೆಸ 1:22, 23). ಬಾಪ್ತಿಸ್ಮದ ಮುಖಾಂತರ ಕ್ರಿಸ್ತ ದೇಹ ವನ್ನು (1 ಕೊರಿಂಥ 12:13, 27), ಯೇಸು ಕಟ್ಟಿದ ಸಭೆಯನ್ನು (ಮತ್ತಾಯ 16:18) ಆತನು ಶಿರಸ್ಸಾಗಿರುವಂಥದ್ದನ್ನು (ಎಫೆಸ 5:23) ನಾವು ಪ್ರವೇಶಿಸುತ್ತೇವೆ. ಕ್ರಿಸ್ತನಲ್ಲಿ ಮತ್ತು ಆತನ ದೇಹದಲ್ಲಿ ಪ್ರವೇಶಿಸುವದರಿಂದ (ರೋಮಾಪುರ 6:3; ಗಲಾತ್ಯ 3:27), ಶಿರಸ್ಸಾದ ಕ್ರಿಸ್ತನಿಂದ ಒದಗಿಸಲ್ಪಟ್ಟ ಎಲ್ಲಾ ಆಶೀರ್ವಾದಗಳಿಗೆ ಸೇರಬಹುದಾದ ಅವಕಾಶವುಂಟು. ಇದು ನೂತನ ಸೃಷ್ಟಿಗಳಾಗುವಂಥ (2 ಕೊರಿಂಥ 5:17), ಎಲ್ಲಾ ಆತ್ಮಿಕ ಆಶೀರ್ವಾದಗಳನ್ನು ಒಳಗೊಂಡಿರುತ್ತದೆ (ಎಫೆಸ 1:3), ಆತನಲ್ಲಿ, ನಮಗೆ ಯೇಸುವಿನ ರಕ್ತದ ಮುಖಾಂತರ ವಿಮೋಚನೆ, ಕೃಪೆ, ರಕ್ಷಣೆ ಮತ್ತು ನಿತ್ಯಜೀವ ಇರುತ್ತದೆ (ಎಫೆಸ 1:7; 2 ತಿಮೊಥೆ 2:1; 2:10; 1 ಯೋಹಾನ 5:11).

ಯೇಸುವನ್ನು ಸೇರುವದಕ್ಕಿಂತ ಮೊದಲು, ನಾವು "ಕ್ರಿಸ್ತನನ್ನು ಸೇರದವರಾಗಿದ್ದು, ಇಸ್ರಾಯೇಲ್ಯ ಹಕ್ಕಿನಲ್ಲಿ ಪಾಲಿಲ್ಲದವರೂ ವಾಗ್ದಾನಕ್ಕೆ ಸಂಬಂಧವಾದ, ಒಡಂಬಡಿಕೆಯಲ್ಲಿ ಸೇರದವರೂ, ಈ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ ದೇವರನ್ನರಿಯದವರೂ ಆಗಿದ್ದೀರೆಂದು ಜ್ಞಾಪಕ ಮಾಡಿಕೊಳ್ಳಿರಿ. ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪ ಸ್ಥರಾದಿರಿ" (ಎಫೆಸ 2:12, 13). ಪಾಪವು ನಮ್ಮನ್ನು ದೇವರಿಂದ ಬೇರೆ ಮಾಡುತ್ತದೆ (ಯೆಶಾಯ 59:1, 2) ಮತ್ತು ಆತನು ತನ್ನ ಮುಖವನ್ನು ನಮಗೆ ವಿರುದ್ಧವಾಗಿ ತಿರುಗಿಸುವಂತೆ ಮಾಡುತ್ತದೆ (1 ಪೇತ್ರ 3:12). ನಾವು ಬಾಪ್ತಿಸ್ಮ ಹೊಂದುವಾಗ, ನಾವು ಯೇಸುವಿನೊಳಗೆ ಪ್ರವೇಶಿಸುತ್ತೇವೆ (ರೋಮಾಪುರ 6:3; ಗಲಾತ್ಯ 3:27). ನಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ (ಅಪೊಸ್ತಲರ ಕೃತ್ಯಗಳು 2:38; 22:16), ಮತ್ತು ನಾವು ಇನ್ನು ಮುಂದೆ ದೇವರಿಲ್ಲದವರೂ ಮತ್ತು ಯೇಸುವಿನಿಂದ ಬೇರ್ಪಡಿಸಲ್ಪಟ್ಟವರೂ ಆಗಿರುವದಿಲ್ಲ.

© 2009 Truth for Today